**ಮಧ್ಯಂತರ ಅರ್ಜಿ ನಂಬರ್.III ಮೇಲಿನ ಆದೇಶ**

ವಾದಿ ಸದ್ರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಆದೇಶದ ಪರಿಹಾರ ಕೇಳಿ ಹೂಡಿರುತ್ತಾರೆ. ಈ ದಾವೆಯ ದಾವೆ ಪತ್ರವನ್ನು ಹಾಗೂ ವಾದಿ ಹಾಜರ್ ಪಡಿಸಿರುವ ದಾಖಲಾತಿಗಳನ್ನು ನಾನು ಪರಿಶೀಲಿಸಿದ್ದೇನೆ. ವಾದಿ ಹೂಡಿರುವ ಈ ದಾವೆಯಲ್ಲಿ ಮೇಲ್ನೋಟದ ಕೇಸು ಇರುವುದು ಕಂಡು ಬರುತ್ತಿದ್ದು ಒಂದು ವೇಳೆ ಏಕತರ್ಪಿ ಹಂಗಾಮಿ ನಿರ್ಬಂಧಕಾಜ್ಞೆ ಆದೇಶಿಸದೇ ಇದ್ದಲ್ಲಿ ನಿಜವಾಗಿಯೂ ವಾದಿ ಹೂಡಿರುವ ದಾವೆಯ ಉದ್ದೇಶ ಸಫಲವಾಗುವುದಿಲ್ಲ. ಈ ಕಾರಣಕ್ಕಾಗಿ ಈ ನ್ಯಾಯಾಲಯವು ವಾದಿ ಸಲ್ಲಿರುವ ಮಧ್ಯಂತರ ಅರ್ಜಿಯನ್ನು ಈ ಸಂದರ್ಭದಲ್ಲಿ ಪುರಸ್ಕರಿಸುವುದು ಸೂಕ್ತವೆಂದು ಭಾವಿಸಿ ಈ ಕೆಳಗಿನ ರೀತಿ ಆದೇಶ ಮಾಡಲಾಗಿದೆ.

**ಆದೇಶ**

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ 3 ನ್ನು ಪುರಸ್ಕರಿಸಲಾಗಿದೆ.

ಮುಂದಿನ ಆದೇಶದವರೆಗು ಪ್ರತಿವಾದಿಯಾ ಅವರ ಕಡೆಯವರು ದಾವಾ ಸ್ಥಳದಲ್ಲಿ ಯಾವುದೇ ರೀತಿಯ ಕಟ್ಟಡ ಕಾಮಗಾರಿಯನ್ನು ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಮಾಡಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 3 ಮತ್ತು ಕಲಂ 151 ರಲ್ಲಿನ ಅಂಶವನ್ನು ವಾದಿಯು ಪಾಲಿಸತಕ್ಕದ್ದು.

ದಾವಾ ಸಮನ್ಸ ಮತ್ತು ಮಧ್ಯಂತರ ಅರ್ಜಿಯ ಬಗ್ಗೆ ನೋಟೀಸನ್ನು ಪ್ರತಿವಾದಿಗಳಿಗೆ ಕಳಿಸತಕ್ಕದ್ದು.

Call on:

**ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.**